ವಿಜಯ ಕರ್ನಾಟಕ

## ಎತ್ತಿನಹೊಳೆ ಯೋಜನೆ ವಿರೋಧಿಸಿ ಕರಾವಳಿ ಜನರ 127 ಕಿಮೀ ಪಾದಯಾತ್ರೆ ಆರಂಭ

# ಕೋಲಾರಕ್ಕೆ ವಂಚನೆ, ಕರಾವಳಿ ಜಿಲ್ಲೆಗಳಿಗೆ ಮೋಸ!

**ವಿಕ ಸುದ್ದಿಲೋಕ** ಮಂಗಳೂರು

ಕೋಲಾರ ಚಿಕ್ಕಬಳ್ಳಾಪುರ ಭಾಗಕ್ಕೆ ಕುಡಿಯುವ ನೀರು ಒದಗಿಸುವ ಉದ್ದೇಶದ ಎತ್ತಿನಹೊಳೆ ಯೋಜನೆಯಿಂದ ಕರಾವಳಿ ಜಿಲ್ಲೆಗಳು ಬರಡಾಗುತ್ತವೆ ಎಂದು ಆಕ್ರೋಶ ವ್ಯಕ್ತಪಡಿಸಿ ಕರಾವಳಿಯ ಜನ ಶನಿವಾರ ಪಾದಯಾತ್ರೆ ಆರಂಭಿಸಿದ್ದಾರೆ.

ಸಂಸದ ನಳಿನ್‌ಕುಮಾರ್ ಕಟೀಲ್ ಅವರ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಆಯೋಜಿಸಿರುವ 'ನಮ್ಮ ನಡಿಗೆ ಎತ್ತಿನಹೊಳೆಗೆ' ಪಾದಯಾತ್ರೆ ಮಂಗಳೂರಿನ ಕಂಕನಾಡಿ ಗರೋಡಿ ಯಿಂದ ಶುರುವಾಗಿದ್ದು 127 ಕಿಮೀ ದೂರವಿರುವ ಎತ್ತಿನಹೊಳೆ ಯೋಜನಾ ಪ್ರದೇಶವನ್ನು 4 ದಿನಗಳಲ್ಲಿ ತಲುಪಲಿದೆ. ಕಾಲ್ನಡಿಗೆಯಲ್ಲಿ ಚೆಂಡೆ, ನಾಸಿಕ್ ತಂಡ, ಪಕ್ಷದ ಪತಾಕೆ, ಕೇಸರಿ, ಬಿಳಿ ವರ್ಣದ ಟೋಪಿಗಳು ರಾರಾಜಿಸುತ್ತಿತ್ತು. ಪಾದಯಾತ್ರೆ ಉದ್ಘಾಟನೆ ವೇಳೆ 1500ಕ್ಕೂ ಅಧಿಕ ಮಂದಿ ಹಾಜರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಕಟೀಲ್, ''ಎತ್ತಿನಹೊಳೆ ಯೋಜನೆ ಮೂಲಕ ನೇತ್ರಾವತಿ ನದಿಯನ್ನು ಬರಡಾಗಿಸುವ ಪ್ರಯತ್ನಕ್ಕೆ ರಾಜ್ಯ ಸರಕಾರ ಮುಂದಾಗಿದೆ. ಇದು ಕೋಲಾರ-ಕರಾವಳಿಯ ಜನರ ಮಧ್ಯೆ ಜಗಳ ತಂದಿಡುವ ಪಿತೂರಿ. 13000 ಕೋಟಿ ರೂ. ವೆಚ್ಚ ಮಾಡಿದರೂ ಕೋಲಾರಕ್ಕೆ ನೀರು ಹೋಗುವುದಿಲ್ಲ, ಇದು ಕೋಲಾರಕ್ಕೆ ವಂಚನೆ, ಕರಾವಳಿಗೆ ಮೋಸ. ಬಯಲು ಸೀಮೆಗೆ ನೀರು ಕೊಡಿ, ಆದರೆ ಕರಾವಳಿಯನ್ನು ಬರಡು ಮಾಡುವ ಈ ಯೋಜನೆ ಬೇಡ,'' ಎಂದು ಹೇಳಿದರು.




ಎತ್ತಿನಹೊಳೆ ಯೋಜನೆ ವಿರುದ್ಧ ಮಂಗಳೂರಿನಿಂದ ಎತ್ತಿನಹೊಳೆವರೆಗೆ ಆಯೋಜಿಸಿರುವ ಕಾಲ್ನಡಿಗೆ ಜಾಥಾ ಕಂಕನಾಡಿ ಗರೋಡಿಯಲ್ಲಿ ಶನಿವಾರ ಆರಂಭವಾಯಿತು.

ದ.ಕ. ಜಿಲ್ಲಾ ಬಿಜೆಪಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

**ಪುತ್ತೂರು ವರದಿ:** ಪುತ್ತೂರಿನಲ್ಲಿ ಶನಿವಾರ ಎತ್ತಿನಹೊಳೆ ಯೋಜನೆ ಕುರಿತು ಮಾಹಿತಿ ಕಾರ್ಯಾಗಾರ ನಡೆಯಿತು. ಸಹ್ಯಾದ್ರಿ ಸಂಚಯನ ಸದಸ್ಯ ಗಿರಿಧರ್ ಕಾಮತ್ ಮಾತನಾಡಿ, ''ಮೂರು ದಶಕಗಳ ಹಿಂದೆ 600 ಕೋಟಿ ರೂ. ವೆಚ್ಚದಲ್ಲಿ ಆರಂಭಗೊಂಡ ವಾರಾಹಿ ನೀರಾವರಿ ಯೋಜನೆ ಇನ್ನೂ ಮುಕ್ತಾಯಗೊಂಡಿಲ್ಲ, ಈಗಲೂ ಕುಂದಾಪುರ, ಉಡುಪಿ ತಾಲೂಕುಗಳ ಕೃಷಿ ಪ್ರದೇಶಕ್ಕೆ ನೀರು ನೀಡಲು ಸಾಧ್ಯವಾಗಿಲ್ಲ, ಹೀಗಿರುವಾಗ 13000 ಕೋಟಿ ಮೊತ್ತದ ಎತ್ತಿನಹೊಳೆ ಯೋಜನೆ ಚಿಕ್ಕಬಳ್ಳಾಪುರ ಪ್ರದೇಶಕ್ಕೆ ನೀರು ನೀಡುತ್ತದೆಯೇ,'' ಎಂದು ಪ್ರಶ್ನಿಸಿದರು.

ನೇತ್ರಾವತಿ ನದಿ ಸಂರಕ್ಷಣಾ ಒಕ್ಕೂಟದ ಸಂಚಾಲಕ ನಿರಂಜನ ರೈ ಮಾತನಾಡಿ, ''ನೇತ್ರಾವತಿ ನದಿ ತಿರುವಿನ ಮೂಲ ವರದಿ ತಯಾರಿಸಿದ ಪರಮಶಿವಯ್ಯ ಅವರೇ ಎತ್ತಿನಹೊಳೆ ಯೋಜನೆ ವಿರೋಧಿಸಿದ್ದರು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ವಿಜ್ಞಾನಿಗಳು ತಯಾರಿಸಿದ ಅಧ್ಯಯನ ವರದಿ ಈ ಯೋಜನೆ ಬೊಗಳೆ ಎಂಬುದನ್ನು ಸಾರಿ ಸಾರಿ ಹೇಳಿದೆ,'' ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ನಾಗೇಶ್ ಹೆಗಡೆ ಮಾತನಾಡಿ, ''ನದಿ ಮತ್ತು ಸಮುದ್ರಕ್ಕೆ ನೇರ ಸಂಬಂಧವಿದೆ. ನದಿಯ ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ, ನದಿ ನೀರು ಸೇರಿದರೆ ಮಾತ್ರ ಸಮುದ್ರ ರಿಫ್ರೆಶ್ ಆಗುತ್ತದೆ. ನದಿಯನ್ನು ಪ್ರಕೃತಿದತ್ತವಾಗಿಯೇ ಹರಿದು ಸಮುದ್ರ ಸೇರಲು ಬಿಡಬೇಕು. ನದಿಯ ನೀರನ್ನು ಬಳಸಲು ನಮಗೆ ಹಕ್ಕಿದೆಯೇ ಹೊರತು ಅದನ್ನು ತಿರುಗಿಸಲು ಹಕ್ಕಿಲ್ಲ,'' ಎಂದರು.